# ನೆಲೆಯಿಲ್ಲದವರು ನಾವು

**ಹಿಂದಿ ಮೂಲ - ಡಾ. ಮನು**
**ಕನ್ನಡಕ್ಕೆ: ಡಾ. ನಾಗರತ್ನ ಕೆ**
ಹಿಂದಿ ಸ್ನಾತಕೋತ್ತರ ವಿಭಾಗ
ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ

ಸೂರಿಲ್ಲದವರು ನಾವು
ಮನೆ ಇದ್ದರೂ ಇಲ್ಲದಂತಿರುವವರು
ಬಂಧುಗಳಿದ್ದರೂ
ಬಂಧ ವನರಿಯದವರು
ಕಾಡದಿರು ಒಂಟಿತನವೇ
ತನುಮನಗಳಲ್ಲಿ,
ಬಾರದಿರುವ
ನಾಳೆಗಳ
ಕಿಡಿಗಳಿವೆ ಇಲ್ಲಿ.
.

# ಉರಿಯುತ್ತಿರು

**ಹಿಂದಿ ಮೂಲ - ಡಾ. ಸುಭಾಷ್ ರಾಯ್**
**ಕನ್ನಡಕ್ಕೆ: ಡಾ. ನಾಗರತ್ನ ಕೆ**
ಹಿಂದಿ ಸ್ನಾತಕೋತ್ತರ ವಿಭಾಗ
ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ

ಬೆಂಕಿ ಇಂದಲೇ ಕಲಿತೆ ನಾನು
ಉರಿಯುವುದನ್ನು
ಇಷ್ಟಿಷ್ಟೇ ಒಟ್ಟು ಗೂಡಿಸುತ್ತಿರುವೆ
ತಾಪವನ್ನು.ಏಕೆಂದರೆ
ಗೊತ್ತಿದೆ ನನಗೆ ಮುಂದೊಂದು ದಿನ
ಆಸ್ಫೋಟ ವಾಗುವುದೆಂದು
ಮಂಕಾಗಿರುವ ಕಿಡಿಗಳು
ಜ್ವಾಲೆಯಾಗುವುವೆಂದು.
.

# ತಂಗಾಳಿಯ ತುಂಟಾಟ

**ಹಿಂದಿ ಮೂಲ - ಡಾ. ಮನು**
**ಕನ್ನಡಕ್ಕೆ: ಡಾ. ನಾಗರತ್ನ ಕೆ**
ಹಿಂದಿ ಸ್ನಾತಕೋತ್ತರ ವಿಭಾಗ
ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ

ಸಮಯಕ್ಕೂ ಸರಿಯುವ
ತವಕವಿದೆ ಇಲ್ಲಿ.
ತಂಗಾಳಿಯ
ಚೆಲ್ಲಾಟ
ಕಾಗದಗಳ ಜೊತೆ
ಕಣ್ಣಾ ಮುಚ್ಚಾಲೆಯಾಟ
ಆದರೂ
ಗಾಳಿಯೊಂದಿಗೆ
ಹಾರಾಡುವಾಸೆ
ಕಾಗದಕ್ಕೂ ಇರಬಾರದೇಕೆ?
ಕಾಗದಗಳು
ಹಾರುವ ಭಯಕ್ಕೆ
ಮೇಲೆ ಭಾರವಿಡುವೆವೇಕೆ?
ಗಾಳಿ ಯೊಂದಿಗಿನ
ಅದರ ಸರಸವನ್ನು
ಕಡೆಗಣಿಸು ವೆವೇಕೆ?
ಸದ್ದಿಲ್ಲದಂತೆ
ಅದುಮಿಟ್ಟಿದೆ ಕಾಗದ
ಹಾರುವ ತನ್ನಿಚ್ಚೆಯ
ಗಾಳಿ ಸುಳಿಯುವವರೆಗೆ.
ಈ ಕಣ್ಣಾ ಮುಚ್ಚಾಲೆಯಾಟ
ತುಂಟಾಟ
ಇರಬಹುದೇ ಪ್ರೀತಿ?
ಹಿಂದೊಂದು ಕಾಲದಲಿ
ಪ್ರಣಯಿಗಳ
ಪ್ರೇಮದಾಶ್ರಯ ವೀ ಕಾಗದ.
ಹಾರುವ ಹಾಳೆಗಳು
ಪೋಣಿಸುತ್ತಿವೆ
ನೆನಪುಗಳ ಸರಮಾಲೆ..